ಗಳನ್ನು ತಂದಿದ್ದರಿಂದ ಸ್ವಲ್ಪ ಅಡೆತಡೆ ಆಗಿದೆ. ಫಾರೆಸ್ಟ್ ಮತ್ತು ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಗಳಂ ಇನ್ನು ಮುಂದೇ ಒಂದೇ ಏಜೆನ್ಸಿ ಮೂಲಕ ಗುತ್ತಿಗೆ ಕೊಡುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ವಿಷಯ ಕ್ಯಾಬಿನೆಟ್ ಮುಂದೆ ಇದೆ. ಅದನ್ನು ಸಾಧ್ಯವಾದ ಮಟ್ಟಿಗೆ ಬಹಳ ಬೇಗ ತೀರ್ಮಾನ ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ,—ಬಹಳ ಬೇಗ ಅಂದರೆ ಎಷ್ಟು ದಿನದಲ್ಲಿ ಮಾಡುತ್ತೀರಿ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ನಿರ್ದಿಷ್ಟವಾಗಿ ಇಷ್ಟೇ ದಿನದಲ್ಲಿ ಮಾಡಲಾಗುತ್ತದೆಂದು ಹೇಳುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಜಿ. ರಾಜಗೌಡ.—ಕರೀಕಲ್ಲು ಸಾಗಾಣಿಕೆ ಬಗ್ಗೆ ಪರವಾನಿಗೆ ಕೊಡುವುದಕ್ಕೆ ಇನ್ನು ಮುಂದೆ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಬದಲು ಮೈನ್ಸ್ ಜಿಯಾಲಜಿ ಡಿಪಾರ್ಟ್‌ಮೆಂಟ್ ಒಟ್ಟಿಗೆ ಸೇರಿ ಒಂದೇ ಏಜೆನ್ಸಿ ಮುಖಾಂತರ ಗುತ್ತಿಗೆ ಕೊಡಲಾಗುತ್ತದೆಂದು ಮಾನ್ಯ ರೆವಿನ್ಯೂ ಮಂತ್ರಿಯವರು ಆಶ್ವಾಸನೆ ಕೊಟ್ಟಿದ್ದಾರೆ. ಆದರ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಇದರ ಬಗ್ಗೆಯೇ ಈಗ ತಾನೆ ಮಾನ್ಯ ಸದಸ್ಯರಿಗೆ ಉತ್ತರವನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು.—ಮುಂದೆ ನಿಮ್ಮ ಪ್ರಶ್ನೆಯೇ ಇದೆ. ತಾವು ಕೇಳಿ.

ರೇಷ್ಮೆ ಗೂಡಿನ ಮಾರುಕಟ್ಟೆಗಳ ಕುರಿತಂ

೧೦೮೭. ಶ್ರೀ ಜಿ. ರಾಜೂಗೌಡ (ಹನೂರು).—ಮಾನ್ಯ ರೇಷ್ಮೆ ಖಾತೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ರೇಷ್ಮೆ ಗೂಡಿನ ಮಾರುಕಟ್ಟೆಗಳು ಎಂದಿನಿಂದ ಯಾವ ಯಾವ ಸ್ಥಳಗಳಲ್ಲಿ ಸ್ಥಾಪನೆಯಾಗಿರುತ್ತವೆ.

ಆ) ರೇಷ್ಮೆ ಗೂಡು ಮಾರುಕಟ್ಟೆಗಳು ಸ್ಥಾಪನೆಯಾದಾಗಿನಿಂದ ದಿನಾಂಕ ೨೦-೨-೮೮ರವರೆಗೆ ಅವುಗಳು ಗಳಿಸಿರುವ ಶುಲ್ಕವೆಷ್ಟು?

ಇ) ಈ ಬಾಬಿನಲ್ಲಿ ರೇಷ್ಮೇ ಕೃಷಿಕರಿಗಾಗಿ ರೇಷ್ಮೆ ನೂಲು ಬಿಚ್ಚಿಸುವವರಿಗಾಗಿ ಮಾಡಿದ ವೆಚ್ಚವೆಷ್ಟು?

ಈ) ರೇಷ್ಮೆ ವಿನಿಮಯಂ ಕೇಂದ್ರ ಸ್ಥಾಪನೆಯಾದ ದಿನದಿಂದ ಇಲ್ಲಿಯವರೆಗೆ ಗಳಿಸಿದ ಶುಲ್ಕವೆಷ್ಟು?

ಶ್ರೀ ಕೆ. ಎಂ. ವಿರಿನಿಯಪ್ಪ (ರೇಷ್ಮೆ ಖಾತೆ ಸಚಿವರು).—

ಅ) ರೇಷ್ಮೆ ಗೂಡಿನ ಮಾರುಕಟ್ಟೆಗಳು ಯಾವ ಯಾವ ಸ್ಥಳಗಳಲ್ಲಿ ಎಂದಿನಿಂದ ಸ್ಥಾಪನೆಯಾಗಿರುತ್ತವೆ ಎಂಬುದನ್ನು ಅನುಬಂಧ-೧ರಲ್ಲಿ ಸಮೂಡಿಸಲಾಗಿದೆ.

ಆ) ರಾಜ್ಯದ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ೧೯೬೬-೭೦ನೇ ಸಾಲಿನಿಂದ ೧೯೮೭-೮೮ರ ಫೆಬ್ರವರಿ ಅಂತ್ಯದವರೆಗೆ ಗಳಿಸಿರುವ ಮಾರುಕಟ್ಟೆ ಶುಲ್ಕ ೨೫.೦೨ ಕೋಟಿ ರೂಪಾಯಿಂಗಳು. ವಿವರಗಳು ಅನುಬಂಧ-೨ರಲ್ಲಿದೆ.

ಇ) ನಾಲ್ಕು ವರ್ಷಗಳಲ್ಲಿ ರೇಷ್ಮೆ ಮಾರುಕಟ್ಟೆಗಳ ಬಾಬಿನಲ್ಲಿ ರೇಷ್ಮೆ ಕೃಷಿಕರಿಗಾಗಿ ಹಾಗೂ ನೂಲು ಬಿಚ್ಚುವವರಿಗಾಗಿ ಸರ್ಕಾರದ ವಿವಿಧ ಯೋಜನೆಗಳಲ್ಲಿ ಸುಮಾರು ೧೦.೦೭ ಕೋಟಿ ರೂಪಾಯಿಗಳು ವೆಚ್ಚವಾಗಿದೆ. ವಿವರಗಳನ್ನು ಅನುಬಂಧ-೩ರಲ್ಲಿ ನೋಡಬಹುದು.

ಈ) ರೇಷ್ಮೆ ವಿನಿಮಯಂ ಕೇಂದ್ರಗಳು ಸ್ಥಾಪನೆಯಾದಂದಿನಿಂದ ೧೯೮೭-೮೮ನೇ ಫೆಬ್ರವರಿ ಅಂತ್ಯದವರೆಗೆ ಗಳಿಸಿದ ಮಾರುಕಟ್ಟೆ ಶುಲ್ಕದ ಮೊತ್ತ ೧೧.೩೧ ಕೋಟಿ ರೂಪಾಯಿಗಳು. ವಿವರಗಳನ್ನು ಅನುಬಂಧ-೪ರಲ್ಲಿ ಕೊಡಲಾಗಿದೆ.

ಅನುಬಂಧ—೧

ಕ್ರಮ ಸಂಖ್ಯೆ	ಸ್ಥಳ	ತಾಲ್ಲೂಕು	ಜಿಲ್ಲೆ	ಎಂದಿನಿಂದ ಸ್ಥಾಪನೆಯಾಗಿದೆ.
೧	೨	೩	೪	೫
೧	ಹೆಬ್ಬೂರು	ತುಮಕೂರು	ತುಮಕೂರು	೧೯೫೪ನೇ ಆಗಸ್ಟ್
೨	ಕುಣಿಗಲ್	ಕುಣಿಗಲ್	,,	,,
೩	ಸಂತೇಮಾವತ್ತೂರು	,,	,,	,,
೪	ಕೆಂಪನಹಳ್ಳಿ	,,	,,	,,
೫	ಹುಲಿಯೂರು ದುರ್ಗ	,,	,,	,,
೬	ಮಾಗಡಿ	ಮಾಗಡಿ	ಬೆಂಗಳೂರು	,,
೭	ವೀರೇಗೌಡನದೊಡ್ಡಿ	,,	,,	,,
೮	ಕುದೂರು	ಮಾಗಡಿ	ಬೆಂಗಳೂರು	೧೯೭೨ನೇ ಆಗಸ್ಟ್
೯	ಚಾಮರಾಜನಗರ	ಚಾಮರಾಜನಗರ	ಮೈಸೂರು	೧೯೭೨ನೇ ಡಿಸೆಂಬರ್
೧೦	ಸಂತೇಮರಳ್ಳಿ	,,	,,	,,
೧೧	ಹರವೆ	,,	,,	,,
೧೨	ನಂಜನಗೂಡು	ನಂಜನಗೂಡು	,,	,,
೧೩	ಕೊಳ್ಳೇಗಾಲ	ಕೊಳ್ಳೇಗಾಲ	,,	೧೯೭೩ನೇ ಜನವರಿ
೧೪	ಹನೂರು	,,	,,	,,
೧೫	ಮಂಳವಳ್ಳಿ	ಮಳವಳ್ಳಿ	ಮಂಡ್ಯ	೧೯೭೩ನೇ ಜೂನ್
೧೬	ಚನ್ನಪಟ್ಟಣ	ಚನ್ನಪಟ್ಟಣ	ಬೆಂಗಳೂರು	,,
೧೭	ರಾಮನಗರಂ	ರಾಮನಗರಂ	,,	,,
೧೮	ಕನಕಪುರ	ಕನಕಪುರ	,,	,,
೧೯	ಕೋಲಾರ	ಕೋಲಾರ	ಕೋಲಾರ	೧೯೭೩ನೇ ಆಗಸ್ಟ್
೨೦	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	,,	,,
೨೧	ಶಿಡ್ಲಘಟ್ಟ	ಶಿಡ್ಲಘಟ್ಟ	,,	,,
೨೨	ಚಿಂತಾಮಣಿ	ಚಂತಾಮಣಿ	,,	,,
೨೩	ವಿಜಯಪುರ	ದೇವನಹಳ್ಳಿ	ಬೆಂಗಳೂರು	,,
೨೪	ಬಾಗಲೂರು	,,	,,	,,

೨೫	ಜಿ. ನರಸೀಪುರ	ಮೈಸೂರು	೧೯೭೮ನೇ ಮಾರ್ಚ್	
೨೬	ಕಾಲಘಟಗಿ	ಹುಬ್ಬಳ್ಳಿ-ಧಾರವಾಡ	೧೯೭೮ನೇ ಮಾರ್ಚ್	
೨೭	ಹಿರೇಕೆರೂರು ಕ್ಯಾಸು	ಹಾವೇರಿ	೧೯೭೮ನೇ ಏಪ್ರಿಲ್	
೨೮	ಅಫಜಲಪುರ	ಗುಲಬರ್ಗಾ	೧೯೭೮ನೇ ಜೂನ್	
೨೯	ಸಿರ್ಸಿ	,,	,,	
೩೦	ಬೆಂಗಳೂರು ಸಿಟಿ.	ಬೆಂಗಳೂರು ದಕ್ಷಿಣ	೧೯೮೦ನೇ ಡಿಸೆಂಬರ್	
೩೧	ಗೌರಿಬಿದನೂರು	ಕೋಲಾರ	,,	
೩೨	ಮಂಚಬಾಣಿಲು	,,	,,	
೩೩	ಬಾಗೇಪಲ್ಲಿ	,,	,,	
೩೪	ತಂಬಾಕೂರು	ತುಮಕೂರು	,,	
೩೫	ಮಂಡ್ಯ	ಮಂಡ್ಯ	,,	
೩೬	ಹುಣಸೂರು	ಮೈಸೂರು	,,	
೩೭	ಬೇಡರಾಯನಪಟ್ಟಣ	ಹಾಸನ	,,	
೩೮	ವಿಜಯನಗರ	ವಿಜಯನಗರ	,,	
೩೯	ಚಿತ್ರದುರ್ಗ	ಚಿತ್ರದುರ್ಗ	,,	
೪೦	ದಾವಣಗೆರೆ	ದಾವಣಗೆರೆ	,,	
೪೧	ರಾಯಚೂರು	ರಾಯಚೂರು	,,	
೪೨	ಬಳ್ಳಾರಿ	ಬಳ್ಳಾರಿ	,,	
೪೩	ಹೊಸಪೇಟೆ	ಬಳ್ಳಾರಿ	,,	
೪೪	ಮಹಾಲಿಂಗಪುರ	ಬೀದರ್	,,	
೪೫	ಮಂಗಳೂರು	ಬಿಜಾಪುರ	,,	
೪೬	ಜೇವರ್ಗಿ	ಗುಲಬರ್ಗಾ	,,	
೪೭	ಪಾವಗಡ	ತುಮಕೂರು	೧೯೮೩ನೇ ಫೆಬ್ರುವರಿ	
೪೮	ಬಿಜಾಪುರ	ಬಿಜಾಪುರ	೧೯೮೩ನೇ ಸೆಪ್ಟೆಂಬರ್	
೪೯	ತೀರ್ಥಹಳ್ಳಿ	ಶಿವಮೊಗ್ಗ	೧೯೮೬ನೇ ಜೂನ್	

ಅನುಬಂಧ — ೨

ಕ್ರಮ ಸಂಖ್ಯೆ	ವರ್ಷ		ಲಕ್ಷ ರೂಪಾಯಿಗಳಲ್ಲಿ ಮಾರುಕಟ್ಟೆ ಶುಲ್ಕ
೧	೨		೩
೧	೧೯೬೯–೭೦	...	೪.೫೭
೨	೧೯೭೦–೭೧	...	೮.೧೫
೩	೧೯೭೧–೭೨	...	೯.೯೨
೪	೧೯೭೨–೭೩	...	೧೫.೭೬
೫	೧೯೭೩–೭೪	...	೨೨.೬೮
೬	೧೯೭೪–೭೫	...	೨೬.೩೨
೭	೧೯೭೫–೭೬	...	೨೯.೬೫
೮	೧೯೭೬–೭೭	...	೪೫.೦೬
೯	೧೯೭೭–೭೮	...	೪೩.೮೧
೧೦	೧೯೭೮–೭೯	...	೫೭.೯೫
೧೧	೧೯೭೯–೮೦	...	೭೩.೦೦
೧೨	೧೯೮೦–೮೧	...	೧೬೮ ೦೬
೧೩	೧೯೮೧–೮೨	...	೨೧೪.೫೫
೧೪	೧೯೮೨–೮೩	...	೨೨೬.೪೬
೧೫	೧೯೮೩–೮೪	...	೨೨೧.೨೬
೧೬	೧೯೮೪–೮೫	...	೨೭೨.೫೪
೧೭	೧೯೮೫–೮೬	...	೩೩೬.೧೫
೧೮	೧೯೮೬–೮೭ (ಫೆಬ್ರವರಿ ಅಂತ್ಯದವರೆಗೆ)	...	೩೮೦.೧೩
	ಒಟ್ಟು	...	೨೫೦೧.೭೬

ಅನುಬಂಧ—೩

(ಲಕ್ಷ ರೂಪಾಯಿಗಳಲ್ಲಿ)

ಕ್ರಮ ಸಂಖ್ಯೆ	ವರ್ಷ	ಯೋಜನೆ (ಕರ್ನಾಟಕ ಅಭಿವೃದ್ಧಿ ಯೋಜನೆ ಸೇರಿ)	ಯೋಜನೇತರ ಲೆಕ್ಕಶೀರ್ಷಿಕೆಗಳು. ಗೂಡಿನ ಮಾರುಕಟ್ಟೆಗಳು.	ಬಿಲ್ ಸ್ವೀಕರಣ ನಿಧಿ ಸ್ಥಾಪನೆ	ಒಟ್ಟು
೧	೧೯೮೪-೮೫	೨೪.೪೬	೭೭.೯೭	೦.೨೩	೧೦೨.೬೬
೨	೧೯೮೫-೮೬	೩೨.೨೯	೧೦೬.೮೬	೨೫.೨೩	೧೬೪.೪೧
೩	೧೯೮೬-೮೭	೪೦.೭೧	೧೨೨.೧೫	೮೮.೨೯	೨೫೧.೨೫
೪	೧೯೮೭-೮೮ (ಫೆಬ್ರವರಿ ಅಂತ್ಯದ ವರೆಗೆ)	೫೧.೦೮	೮೮.೧೧	೭೦.೬೯	೨೦೯.೮೮
ಕರ್ನಾಟಕ ಅಭಿವೃದ್ಧಿ ಯೋಜನೆಯ ಕಟ್ಟಡ ಕಾಮಗಾರಿಗಳು.		೨೭೮.೯೫	...	...	೨೭೮.೯೫
	ಒಟ್ಟು	೪೨೭.೪೯	೪೯೫.೨೨	೧೪೪.೪೪	೧೦೦೭.೧೫

ಅನುಬಂಧ—೪

ಕ್ರಮ ಸಂಖ್ಯೆ	ವರ್ಷ		ಲಕ್ಷ ರೂಪಾಯಿಗಳಲ್ಲಿ
			ಮಾರುಕಟ್ಟೆ ಶುಲ್ಕ.
೧	೧೯೭೯-೮೦	...	೧೬.೬೦
೨	೧೯೮೦-೮೧	...	೮೯.೪೦
೩	೧೯೮೧-೮೨	...	೧೯೧.೫೦
೪	೧೯೮೨-೮೩	...	೧೯೨.೫೦
೫	೧೯೮೩-೮೪	...	೧೩೬.೮೦
೬	೧೯೮೪-೮೫	...	೧೦೬.೯೦
೭	೧೯೮೫-೮೬	...	೧೨೮.೦೦
೮	೧೯೮೬-೮೭	...	೧೯೯.೩೭
೯	೧೯೮೭-೮೮ (ಫೆಬ್ರವರಿ ಅಂತ್ಯದವರೆಗೆ)	...	೧೪೦.೪೭
		ಒಟ್ಟು.	೧೧೩೦.೭೪

ಶ್ರೀ ಜಿ. ರಾಜೂಗೌಡ.—ಸ್ವಾಮಿ, ರಾಜ್ಯದಲ್ಲಿರತಕ್ಕಂಥ ಳಿರ ರೇಷ್ಮೆಗೂಡಿನ ಮಾರುಕಟ್ಟೆಗಳಿಗೆ ಮತ್ತು ರೇಷ್ಮೆ ವಿನಿಮಯ ಕೇಂದ್ರಗಳಿಂದ ತಾವು ಸಿ.ಸಿಲಕ್ಷ ರೂಪಾಯಿಗಳನ್ನು ಶುಲ್ಕ ರೂಪದಲ್ಲಿ ಗಳಿಸುತ್ತಾ ಇದ್ದೀರಿ. ಇದರಲ್ಲಿ ನೇರವಾಗಿ ರೇಷ್ಮೆ ಕೃಷಿಕರಿಗೆ ಮತ್ತು ನೂಲು ಬಿಚ್ಚುವವರಿಗೆ ಎಷ್ಟು ಹಣವನ್ನು ಖರ್ಚು ಮಾಡುತ್ತಾ ಇದ್ದೀರಿ ?

ಶ್ರೀ ಕೆ. ಎಂ. ಮುನಿಯಪ್ಪ.—ಅಧ್ಯಕ್ಷರೆ, ಅನುಬಂಧ ೧ರಲ್ಲಿ ವಿವರಗಳನ್ನು ಕೊಟ್ಟಿದ್ದೇವೆ. ಆದರೂ ಕೂಡ ಮಾನ್ಯ ಸದಸ್ಯರು ಹೇಳಿದಂತೆ ಈಗಾಗಲೇ ಈ ನಿಧಿಯಿಂದ ರೇಷ್ಮೆ ಬೆಳೆಗಾರರಿಗೆ, ನೂಲು ಬಿಚ್ಚುವವರಿಗೆ ಒಂದು ಕೋಟಿ, ಎಂಭತ್ತೈದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇದಲ್ಲದೆ ಮಾರುಕಟ್ಟೆಗಳಿಗೆ ಮತ್ತು ವಿನಿಮಯ ಕೇಂದ್ರಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳ ಅಡಿಯಲ್ಲಿ ಕೂಡ ಹಾಕಿಕೊಂಡು ಒಟ್ಟು ಈ ತನಕ ೧೦ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಶ್ರೀ ಜಿ. ರಾಜೂಗೌಡ.—ರೇಷ್ಮೆ ವಿನಿಮಯ ಕೇಂದ್ರದವರಿಗೆ ನೇರವಾಗಿ ಖರ್ಚು ಮಾಡತಕ್ಕಂಥಾದ್ದು ಅಂದರೆ, ಯಾರು ರೇಷ್ಮೆಯನ್ನು ಮಾರುಕಟ್ಟೆಗೆ ತರುತ್ತಾರೋ ಅಂಥವರಿಗೆ ಮಾರುಕಟ್ಟೆಯ ವ್ಯವಸ್ಥೆ, ಅಲ್ಲಿ ಕುಡಿಯುವ ನೀರು ಇತ್ಯಾದಿಯಾಗಿ ಅಗತ್ಯ ಸೌಲಭ್ಯಗಳು ಮತ್ತು ತಂಗಲಿಕ್ಕೆ ಒಂದು ಭವನ ಕಟ್ಟುವ ವ್ಯವಸ್ಥೆಯನ್ನು ಅಗತ್ಯವಾಗಿ ಮಾಡಬೇಕು. ಈ ರೇಷ್ಮೆ ವಿನಿಮಯ ಕೇಂದ್ರಗಳನ್ನು ಮಾಡಿರತಕ್ಕಂಥ ಉದ್ದೇಶ ಏನೆಂದರೆ ನೇರವಾಗಿ ರೇಷ್ಮೆ ಬೆಳೆಯತಕ್ಕಂಥ ರೈತರಿಂದ ರೇಷ್ಮೆಯನ್ನು ತೆಗೆದುಕೊಳ್ಳುವಂಥ ಒಂದು ವ್ಯವಸ್ಥೆಯ ಸಲುವಾಗಿ ಈ ಕೇಂದ್ರಗಳು ಸ್ಥಾಪನೆಯಾದವು. ಆ ಒಂದು ಉದ್ದೇಶವು ಸಫಲವಾಗಬೇಕಾಗಿದೆ ಆದುದರಿಂದ ದಯವಮಾಡಿ ಶುಲ್ಕರೂಪದಲ್ಲಿ ಬರುವ ಸಿ.ಕೋಟಿ ರೂಪಾಯಿಗಳನ್ನು ಆದಕ್ಕೆ ಖರ್ಚು ಮಾಡಬೇಕು. ಆ ಕಾರಣದಿಂದಾಗಿ ದಯವಮಾಡಿ ಈ ಬಗ್ಗೆ ಆ ಹಣವನ್ನು ಉಪಯೋಗಿಸುವ ಬಗ್ಗೆ ಒಂದು ಆಶ್ವಾಸನೆಯನ್ನು ತಾವು ಕೊಡಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ. ಹಾಗೆಯೇ ಇನ್ನು ಮುಂದೆ ಬರತಕ್ಕಂಥ ಮಾರುಕಟ್ಟೆ ಶುಲ್ಕವನ್ನು ಅಲ್ಲಿನ ಒಂದು ನಿಧಿಗೆ, ರೇಷ್ಮೆ ಕೃಷಿಕರ ಸೌಲಭ್ಯಗಳ ಸಲುವಾಗಿರುವ ನಿಧಿಗೆ ವಿನಿಸಲಾಗಿಡುತ್ತೀರಿ ಎಂಬ ಒಂದು ಆಶ್ವಾಸನೆಯನ್ನು ಮಾನ್ಯ ಮಂತ್ರಿಗಳು ಕೊಡಬೇಕು.

ಶ್ರೀ ಕೆ. ಎಂ. ಮುನಿಯಪ್ಪ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗೆ ನನ್ನ ಉತ್ತರ ಇಷ್ಟೇ. ರೇಷ್ಮೆ ಬೆಳೆಗಾರರ ಮತ್ತು ನೂಲು ಬಿಚ್ಚುವವರ ಸೌಲಭ್ಯಗಳ ಸಲುವಾಗಿ ಮಾಡಿರುವ ನಿಧಿ ಏನಿದೆ, ಅದರ ಹಣವನ್ನು ಅವರಿಗಾಗಿಯೇ ಖರ್ಚು ಮಾಡುತ್ತಾ ಇದ್ದೇವೆ. ಮೊದಲು ಒಂದೊಂದು ಕಡೆಯಲ್ಲಿ ಕಟ್ಟಡಗಳು ಇರಲಿಲ್ಲ, ಅಲ್ಲೆಲ್ಲಾ ಕಟ್ಟಡಗಳನ್ನು ಕಟ್ಟಿದ್ದೇವೆ. ಮತ್ತು ಇನ್ನೂ ಕೆಲವು ಕಡೆಗಳಲ್ಲಿ ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ. ಕೋಲಾರವು ಒಂದು ಜಿಲ್ಲಾ ಕೇಂದ್ರವಾಗಿದ್ದರೂ ಕೂಡ ಒಂದು ವ್ಯವಸ್ಥಿತವಾದ ಗೈ್ರನೇಜ್ ಅಲ್ಲಿ ಇರಲಿಲ್ಲ. ಅಲ್ಲಿ ಒಂದು ಗೈ್ರನೇಜ್‌ನ್ನು ಕಟ್ಟುವ ಕಾರ್ಯವನ್ನು ಈಗ ಕೈಗೊಂಡಿದ್ದೇವೆ. ಇದಲ್ಲದೆ ಮಾರುಕಟ್ಟೆಗೆ ಬರತಕ್ಕಂಥ ರೈತರಿಗೆ, ಕೃಷಿಕರಿಗೆ ಅನುಕೂಲತೆಗಾಗಿ ರೈತಭವನವನ್ನು ಕಟ್ಟುವ ಒಂದು ಯೋಜನೆಯನ್ನು ನಾವು ಹಾಕಿಕೊಂಡಿದ್ದೇವೆ. ಅದನ್ನು ಈಗ ಕಾರ್ಯಗತ ಮಾಡುತ್ತಾ ಇದ್ದೇವೆ. ಅಂತಹ ಕಡೆಗಳಲ್ಲೆಲ್ಲಾ ಸ್ಥಳಾವಕಾಶ ಮಾಡುವುದಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಇತ್ಯಾದಿ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡಿದ್ದೇವೆ. ಈ ಖರ್ಚುಗಳಿಗೆ ಹಣವನ್ನು ಆ ನಿಧಿಯಿಂದ ತೆಗೆದುಕೊಳ್ಳುತ್ತಾ ಇದ್ದೇವೆ. ಮುಂದೆಯೂ ಕೂಡ ಕೃಷಿಕರ, ನೂಲು ಬಿಚ್ಚುವವರ ಸಲುವಾಗಿ ನಿಧಿಯಿಂದ ಹಣವನ್ನು ಖರ್ಚು ಮಾಡುತ್ತೇವೆ ಎಂದು ಹೇಳಬಯಸುತ್ತೇನೆ.

ಶ್ರೀ ಜಿ. ರಾಜೂಗೌಡ.—ಅಧ್ಯಕ್ಷರೇ, ರೇಷ್ಮೆ ಕೃಷಿಕರ ವಿಚಾರದಲ್ಲಿ ಇನ್ನೊಂದು ವಿಚಾರ ಕೇಳಬೇಕಾಗಿದೆ...

ಅಧ್ಯಕ್ಷರು.—ದಯವಮಾಡಿ ತಾವು ಕುಳಿತುಕೊಳ್ಳಬೇಕು. ಮುಂದಿನ ಪ್ರಶ್ನೆಯನ್ನು ಶ್ರೀ ಶಿವಣ ನವರು ಕೇಳಬಹುದು.